# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | | **118 (87)** |
| **ಸದಸ್ಯರ ಹೆಸರು** | | **ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭೆಯಿಂದ ಚುನಾಯಿತರಾದವರು)** |
| **ಉತ್ತರಿಸಬೇಕಾದ ದಿನಾಂಕ** | | **17-08-2026** |
| **ಉತ್ತರಿಸಬೇಕಾದ ಸಚಿವರು** | | **ಉನ್ನತ ಶಿಕ್ಷಣ ಸಚಿವರು** |
| | **ಪ್ರಶ್ನೆ** | **ಉತ್ತರ** |
| (ಅ) | 2025-26ನೇ ಸಾಲಿನಲ್ಲಿ ಕಾಲೇಜು ಶಿಕ್ಷಣ ಇಲಾಖೆಯಡಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಅತಿಥಿ ಉಪನ್ಯಾಸಕ ಹುದ್ದೆ ಪಡೆಯಲು 249 ಅಭ್ಯರ್ಥಿಗಳು ನಕಲಿ ಹಾಗೂ ಅಮಾನ್ಯ ಪಿಎಚ್‌ಡಿ ಪ್ರಮಾಣ ಪತ್ರಗಳನ್ನು ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | 2025-26ನೇ ಸಾಲಿನಲ್ಲಿ ಆನ್‌ಲೈನ್ ಕೌನ್ಸಲಿಂಗ್ ಮೂಲಕ ಕಾಲೇಜು ಆಯ್ಕೆ ಮಾಡಿಕೊಂಡು, ಕರ್ತವ್ಯಕ್ಕೆ ಹಾಜರಾಗಿರುವ ಎಲ್ಲಾ ಅತಿಥಿ ಉಪನ್ಯಾಸಕರ ಸ್ನಾತಕೋತ್ತರ ಪದವಿ ಅಂಕಪಟ್ಟಿ ಮತ್ತು NET, SLET, K-SET, PHD., M.PHIL ಹಾಗೂ ವಿಕಲಚೇತನ ಪ್ರಮಾಣ ಪತ್ರ ಮತ್ತು ಕಲ್ಯಾಣ ಕರ್ನಾಟಕ ಪ್ರಮಾಣ ಪತ್ರಗಳ ನೈಜತೆ ಪರಿಶೀಲನೆಗಾಗಿ ಪ್ರಾಂಶುಪಾಲರು ಅನುಸರಿಸಬೇಕಾದ ಕ್ರಮಗಳ ಕುರಿತು ಅಧಿಕೃತ ಪರಿಶೀಲನಾ ಕಾರ್ಯವಿಧಾನ (STANDARD OPERATING PROCEDURE) (SOP) ವನ್ನು ಹೊರಡಿಸಲಾಗಿರುತ್ತದೆ.<br><br>ಅದರಂತೆ, ಸಂಬಂದಪಟ್ಟ ಕಾಲೇಜುಗಳ ಪ್ರಾಂಶುಪಾಲರುಗಳು ಇಲಾಖೆಯ EMIS ಪೋರ್ಟಲ್‌ನಲ್ಲಿ ದಾಖಲಿಸಿರುವ ಮಾಹಿತಿಯ ಅನುಸಾರ ಹಾಗೂ ಕೇಂದ್ರ ಕಛೇರಿ ಹಂತದ ಇಲಾಖಾ ಪರಿಶೀಲನಾ ಸಮಿತಿಯ ವರದಿಯನುಸಾರ 2025-26ನೇ ಶೈಕ್ಷಣಿಕ ಸಾಲಿನಲ್ಲಿ ಕರ್ತವ್ಯ ನಿರ್ವಹಿಸಿ, ದಾಖಲೆಗಳನ್ನು ಸಲ್ಲಿಸಿರುವ ಅತಿಥಿ ಉಪನ್ಯಾಸಕರುಗಳಲ್ಲಿ, ಅಧಿಕೃತ ಪರಿಶೀಲನಾ ಕಾರ್ಯವಿಧಾನದ (STANDARD OPERATING PROCEDURE) (SOP) ಅನ್ವಯ ಕ್ರಮಬದ್ಧವಾಗಿರದ (ನಕಲಿ/ಅಮಾನ್ಯ) ದಾಖಲೆಗಳನ್ನು ಸಲ್ಲಿಸಿದ್ದ ಒಟ್ಟು 288 ಅತಿಥಿ ಉಪನ್ಯಾಸಕರುಗಳನ್ನು ಪ್ರಸಕ್ತ 2026-27ನೇ ಸಾಲಿನ ಅತಿಥಿ ಉಪನ್ಯಾಸಕರ ಆಯ್ಕೆ ಪ್ರಕ್ರಿಯೆಯಿಂದ ಹೊರಗಿಡಲಾಗಿದೆ ಹಾಗೂ ಸರ್ಕಾರಕ್ಕೆ ಸುಳ್ಳು ಮಾಹಿತಿ/ದಾಖಲೆ ನೀಡಿ ವಂಚನೆ ಎಸಗಲು ಪ್ರಯತ್ನಿಸಿರುವುದರಿಂದ ಅವರುಗಳ ವಿರುದ್ಧ ಭಾರತ ನ್ಯಾಯ ಸಂಹಿತೆಯಡಿ ಅನ್ವಯವಾಗುವ ನಿಬಂಧನೆಗಳಡಿ ಸಂಬಂಧಪಟ್ಟ ಪೊಲೀಸ್ ಠಾಣೆಯಲ್ಲಿ ಕ್ರಿಮಿನಲ್ ಮೊಕದ್ದಮೆ ದಾಖಲಿಸಲು ಪ್ರಾಂಶುಪಾಲರಿಗೆ ಸೂಚಿಸಲಾಗಿರುತ್ತದೆ. |
| (ಆ) | ನೆಟ್ (NET) ಅಥವಾ ಕೆ-ಸೆಟ್ (K-SET) ಪರೀಕ್ಷೆಯಲ್ಲಿ ತೇರ್ಗಡೆಯಾಗದ ಅಭ್ಯರ್ಥಿಗಳು ಯುಜಿಸಿ (UGC) ನಿಯಮಾವಳಿಗಳನ್ನು ಮರೆಮಾಚಿ ಹುದ್ದೆ ಗಿಟ್ಟಿಸಲು ಸುಳ್ಳು ಮಾಹಿತಿ ನೀಡಿ ವಂಚಿಸಿರುವುದು ಕಂಡುಬಂದಿದ್ದು, ಇವರ ವಿರುದ್ಧ ಕೈಗೊಂಡಿರುವ ಕಾನೂನು ಕ್ರಮಗಳೇನು; | |
| (ಇ) | ಇಲಾಖೆಯ ಇ-ಎಂಐಎಸ್ (EMIS) ಪೋರ್ಟಲ್ ಪರಿಶೀಲನೆ ಹಾಗೂ ಉನ್ನತ ಮಟ್ಟದ ಸಮಿತಿಯ ಶಿಫಾರಸ್ಸಿನಂತೆ ನಕಲಿ ಪಿಎಚ್‌ಡಿ ಪ್ರಮಾಣ ಪತ್ರ ಸಲ್ಲಿಸಿ ಈಗಾಗಲೇ ಸೇವೆ ಸಲ್ಲಿಸುತ್ತಿರುವವರನ್ನು ತಕ್ಷಣವೇ | ಸಂಬಂಧಪಟ್ಟ ಕಾಲೇಜುಗಳ ಪ್ರಾಂಶುಪಾಲರುಗಳು ಇಲಾಖೆಯ EMIS ಪೋರ್ಟಲ್‌ನಲ್ಲಿ ದಾಖಲಿಸಿರುವ ಮಾಹಿತಿಯಾನುಸಾರ ಹಾಗೂ ಕೇಂದ್ರ ಕಛೇರಿ ಹಂತದ ಇಲಾಖಾ ಪರಿಶೀಲನಾ ಸಮಿತಿಯ ವರದಿಯನುಸಾರ 2025-26ನೇ ಶೈಕ್ಷಣಿಕ ಸಾಲಿನಲ್ಲಿ ಕರ್ತವ್ಯ ನಿರ್ವಹಿಸಿರುವ ಅತಿಥಿ ಉಪನ್ಯಾಸಕರಲ್ಲಿ |

| | | |
|---|---|---|
| | ಸೇವೆಯಿಂದ ವಜಾಗೊಳಿಸಲು ಕ್ರಮ ಕೈಗೊಳ್ಳಲಾಗಿದೆಯೇ; | ಅಧಿಕೃತ ಪರಿಶೀಲನಾ ಕಾರ್ಯವಿಧಾನದ (STANDARD OPERATING PROCEDURE) (SOP) ಅನ್ವಯ ಕ್ರಮಬದ್ಧವಾಗಿರದ (ನಕಲಿ/ಅಮಾನ್ಯ) ದಾಖಲೆಗಳನ್ನು ಸಲ್ಲಿಸಿದ್ದ ಅತಿಥಿ ಉಪನ್ಯಾಸಕರನ್ನು ಪ್ರಸಕ್ತ 2026-27ನೇ ಸಾಲಿನ ಅತಿಥಿ ಉಪನ್ಯಾಸಕರ ಆಯ್ಕೆ ಪ್ರಕ್ರಿಯೆಯಿಂದ ಹೊರಗಿಡಲಾಗಿದೆ. |
| (ಈ) | ರಾಜ್ಯದಲ್ಲಿರುವ ಸುಮಾರು 430ಕ್ಕೂ ಹೆಚ್ಚು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು ಮಾತ್ರವಲ್ಲದೆ, ಖಾಸಗಿ ಅನುದಾನಿತ ಕಾಲೇಜುಗಳಲ್ಲಿಯೂ ಇಂತಹ ನಕಲಿ ಪಿಎಚ್‌ಡಿ ಪ್ರಮಾಣ ಪತ್ರಗಳ ದುರುಪಯೋಗ ತಡೆಯಲು ಹಾಗೂ ಪಾರದರ್ಶಕ ಪರಿಶೀಲನೆಗೆ ಸರ್ಕಾರ ರೂಪಿಸಿರುವ ಸ್ಪಷ್ಟ ಕಟ್ಟುನಿಟ್ಟಿನ ನಿಯಮಗಳೇನು? (ವಿವರ ನೀಡುವುದು) | ಇಲಾಖೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು ಮಾತ್ರವಲ್ಲದೆ ಖಾಸಗಿ ಅನುದಾನಿತ ಕಾಲೇಜುಗಳಲ್ಲಿಯೂ ಸಹ ವಿವಿಧ ವಿಷಯಗಳ ಸಹಾಯಕ ಪ್ರಾಧ್ಯಾಪಕರ ಖಾಲಿ ಹುದ್ದೆಗಳ ಭರ್ತಿಗೆ ಸಂಬಂಧಿಸಿದಂತೆ ಅಭ್ಯರ್ಥಿಗಳ ವಿದ್ಯಾರ್ಹತೆ, ಮೀಸಲಾತಿ ಮತ್ತಿತರೆ ದಾಖಲೆಗಳನ್ನು ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರಗಳೊಂದಿಗೆ ಪರಿಶೋಧಿಸಿದ ನಂತರ ಸ್ವೀಕೃತವಾಗುವ ನೈಜತೆ ವರದಿಗಳ ಆಧಾರದ ಮೇಲೆ ಅಭ್ಯರ್ಥಿಗಳನ್ನು ನೇಮಕಾತಿಗೆ ಪರಿಗಣಿಸಲಾಗುತ್ತದೆ. ಅದರಂತೆ ಎಂ.ಫಿಲ್. ಪಿಹೆಚ್.ಡಿ. ಅಂಕಪಟ್ಟಿಗಳ ನೈಜತೆ ಪರಿಶೀಲನೆಗಾಗಿ ಸಂಬಂಧಪಟ್ಟ ವಿಶ್ವವಿದ್ಯಾಲಯಗಳಿಗೆ ರವಾನಿಸಲಾಗುತ್ತದೆ. ವಿಶ್ವವಿದ್ಯಾಲಯಗಳಿಂದ ಸ್ವೀಕೃತವಾಗುವ ನೈಜತೆ ವರದಿಯ ಆಧಾರದ ಮೇಲೆ ನೇಮಕಾತಿಗೆ ಪರಿಗಣಿಸಲು ಕ್ರಮವಹಿಸಲಾಗುತ್ತದೆ.<br><br>ಖಾಸಗಿ ಅನುದಾನಿತ ಕಾಲೇಜುಗಳಲ್ಲಿ ಇಲಾಖೆ/ಸರ್ಕಾರದಿಂದ ಅತಿಥಿ ಉಪನ್ಯಾಸಕರ ನೇಮಕಾತಿಯನ್ನು ಮಾಡುತ್ತಿಲ್ಲ. |

ಇಡಿ 257 ಡಿಸಿಇ 2026 (ಇ)

(ಬಸವರಾಜ ರಾಯರೆಡ್ಡಿ)
ಉನ್ನತ ಶಿಕ್ಷಣ ಸಚಿವರು